# ರಂಗಭೂಮಿಗೆ ಪ್ರೇಕ್ಷಕರೇ ಮುಖ್ಯ...



ಸಿನಿಮಾ ನಿರ್ಮಾಣಕ್ಕೆ 'ಸ್ವರ್ಣಕಮಲ' ಪಡೆದ 84ರ ಹರೆಯದ ಸದಾನಂದ ಸುವರ್ಣ, ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರ ಎರಡರಲ್ಲೂ ಪಳಗಿದವರು. ಈಗ ರಂಗಭೂಮಿಯತ್ತಲೇ ಅವರ ಒಲವು.

★ **ಕೋಡಿಬೆಟ್ಟು ರಾಜಲಕ್ಷ್ಮಿ**

*ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರ ಎರಡರಲ್ಲೂ ಸಕ್ರಿಯರಾಗಿರುವವರು ನೀವು. ಯಾವುದು ನಿಮಗೆ ಹೆಚ್ಚು ಆಪ್ತ?*

ನನಗೆ ರಂಗಭೂಮಿಯೇ ಹೆಚ್ಚು ಆಪ್ತ. ನಾನು ಮುಂಬೈಯಲ್ಲಿ ರಂಗಭೂಮಿಯಲ್ಲಿ ಆರು ದಶಕಗಳ ಕಾಲ ತೊಡಗಿಸಿಕೊಂಡಿದ್ದೆ. ಮಂಗಳೂರಿಗೆ ಬಂದು ಹತ್ತು ವರ್ಷಗಳಾಯಿತು. ನಾನು ಇಲ್ಲಿ ಬಂದಾಗ ಹವ್ಯಾಸಿ ರಂಗಭೂಮಿಯಲ್ಲಿ ಹೆಚ್ಚಿನ ಚಟುವಟಿಕೆ ನಡೀತಾ ಇರಲಿಲ್ಲ. ಅಭಿನವ, ಅಭಿವ್ಯಕ್ತ, ಆಯನ ಮುಂತಾದ ಸಂಘಟನೆಗಳ ಕಲಾವಿದರು ಇದ್ದರು. ಮುಂಬೈಯಲ್ಲಿ ಉದಯ ಕಲಾನಿಕೇತನ ಹವ್ಯಾಸಿ ಸಂಘದ ಮೂಲಕ ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದೆ. ಮಂಗಳೂರಿನಲ್ಲಿ ಮೊದಲು 'ಉರುಳು' ನಾಟಕ ನಿರ್ದೇಶಿಸಿದೆ. 'ಮಳೆ ನಿಂತ ಮೇಲೆ', 'ಕೋರ್ಟ್ ಮಾರ್ಷಲ್' ಮತ್ತು 'ಕಲಂಕ್‌ದಿ ನೀರು' ಎಂಬ ತುಳು ನಾಟಕವನ್ನೂ ನಿರ್ದೇಶಿಸಿದೆ. ಅವುಗಳಿಗೆ ಅತ್ಯುತ್ತಮ ಪ್ರತಿಕ್ರಿಯೆಗಳು ಬಂದಿವೆ ಎನ್ನುವುದು ಖುಷಿಯ ವಿಚಾರ. ರಂಗಚಟುವಟಿಕೆ ತುಂಬ ಖುಷಿಕೊಡುತ್ತದೆ.

*ರಂಗಭೂಮಿಯಲ್ಲಿರುವ ಸೆಳೆತ ಏನದು?*

ಹಿಂದೆಲ್ಲ ನಾಟಕದಲ್ಲಿ ಪಾತ್ರ ಮಾಡಲು ತರಬೇತಿ ಶಿಬಿರ ಇರಲಿಲ್ಲ. ಆದರೂ ಒಳ್ಳೆಯ ನಾಟಕಗಳು ಬರುತ್ತಿದ್ದವು. ಯಾಕೆಂದರೆ ಇದಕ್ಕೆ ನೃತ್ಯ ಸಂಗೀತದಂತೆ ಗುರು ಬೇಕಿಲ್ಲ. ನೋಡಿಯೇ ಕಲಿಯಬಹುದಾದ ಮಾಧ್ಯಮ. ಹಿಂದಿನ ನಟರೆಲ್ಲ ಹೀಗೇ ಬೆಳೆದು ಬಂದವರು. ನಾವು ಹೇಳುವ ಸಿದ್ಧಾಂತಗಳನ್ನೆಲ್ಲ ಅವರು ತಿಳಿಯದೆಯೇ ಪ್ರಯೋಗಿಸುತ್ತಾ ಇದ್ದರು. ನನಗೆ ಮುಂಬೈಯಲ್ಲಿ ಹತ್ತು ವರ್ಷಗಳಲ್ಲಿ ಹಿಂದಿ, ಗುಜರಾತಿ, ಮರಾಠಿ, ಬೆಂಗಾಲಿ ನಾಟಕಗಳನ್ನು ನೋಡುವ ಅವಕಾಶ ಸಿಕ್ಕಿತು. ಬಳಿಕ ನಾಟ್ಯ ಅಕಾಡೆಮಿಯಲ್ಲಿ ಕಲಿಯುವಿಕೆ ಶುರು ಮಾಡಿದಾಗ ಈ ಕ್ಷೇತ್ರದ ಅಗಾಧ ಸಾಧ್ಯತೆ ಅರಿವಾಯಿತು.

ನಾಟಕವೊಂದರಲ್ಲಿ ಪ್ರೇಕ್ಷಕ ಭಾವನಾತ್ಮಕವಾಗಿ ಭಾಗವಹಿಸಬೇಕು. ಅದೊಂದು ಕೇವಲ ಬೌದ್ಧಿಕ ಕಸರತ್ತು ಆಗಬಾರದು. ತಾಂತ್ರಿಕತೆಯಾಗಲೀ, ಸಂಗೀತವಾಗಲೀ ಪ್ರಧಾನವಾಗದೇ, ಅದು ಕಥೆಗೆ ಪೂರಕವಾಗಿಯಷ್ಟೇ ಇರಬೇಕು. ನಾಟಕಕ್ಕೆ ಸತ್ವ ಬರುವುದು ಅಭಿನಯದಿಂದ. ವಾಚಿಕ ಮತ್ತು ಆಂಗಿಕ ಅಭಿನಯಗಳಿಗೆ ಒತ್ತು ಕೊಡುವುದರಿಂದ ನಾಟಕ ಪರಿಣಾಮಕಾರಿ ಯಾಗುತ್ತದೆ. ನಾಟಕವು ಪ್ರೇಕ್ಷಕರಿಗೆ ಮನರಂಜನೆಯನ್ನು ಕೊಡುವುದರ ಜೊತೆಗೆ, ಅವರ ಮನಸ್ಸನ್ನು ವಿಕಾಸಗೊಳಿಸಲು ಪೂರಕವಾಗಿ ಇರಬೇಕು. ಜನಪ್ರಿಯತೆಯೂ ಮುಖ್ಯವಾಗುತ್ತದೆ. ರಂಗಭೂಮಿಯಿಂದ ಪ್ರೇಕ್ಷಕರು ದೂರ ಸರಿಯುವಂತಹ ಪ್ರದರ್ಶನ ಆಗಬಾರದಷ್ಟೆ. ರಂಗಭೂಮಿಯಲ್ಲಿ ಪ್ರೇಕ್ಷಕರೇ ಮುಖ್ಯ ಘಟಕ ಎಂದು ನಂಬಿದ್ದೇನೆ.

*ಪ್ರಸ್ತುತ ನಮ್ಮ ರಂಗಭೂಮಿ ಕ್ಷೇತ್ರ ಹೇಗಿದೆ ಅಂತೀರಿ ?*

ಒಳ್ಳೆಯ ನಾಟಕಕ್ಕೆ ಇಂದಿಗೂ ಪ್ರೇಕ್ಷಕರಿದ್ದಾರೆ. ಹವ್ಯಾಸಿ ನಾಟಕಗಳಿಗೆ ಪ್ರೇಕ್ಷಕರು ಬಂದೇ ಬರುತ್ತಾರೆ. ಆದರೆ ಹವ್ಯಾಸಿ ರಂಗಭೂಮಿಯೇ ಸಂಕಷ್ಟದಲ್ಲಿದೆ ಅನಿಸುತ್ತಿದೆ. ಮನರಂಜನೆಯ ಕ್ಷೇತ್ರದಲ್ಲಿ ಟಿವಿ ಮತ್ತು ಸಿನಿಮಾದ ಪಾರುಪತ್ಯವೇ ಹೆಚ್ಚಾಗಿದೆ. ರಂಗಭೂಮಿಗೆ ಬೇಕಾದ ಶ್ರಮದ ಅಗತ್ಯ ಟಿವಿ ಮತ್ತು ಸಿನಿಮಾ ನಟರಾಗಲು ಇರುವುದಿಲ್ಲ. ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ ಆದಾಯ ಬರುವುದಿಲ್ಲ. ಅಷ್ಟೇ ಏಕೆ, ಹಣವನ್ನು ಕಳೆದುಕೊಳ್ಳಬೇಕಾಗುತ್ತದೆ.

ಬೆಂಗಳೂರಿನಂತಹ ನಗರದಲ್ಲಿಯೂ ಹವ್ಯಾಸಿ ರಂಗಭೂಮಿಯ ಖದರು ಕಡಿಮೆಯಾಗಿದೆ. ಕರಾವಳಿಯಲ್ಲಿಯೂ ತುಳು ಸಿನಿಮಾಗಳ ದೆಸೆಯಿಂದ ತುಳು ರಂಗಭೂಮಿಯೂ, ಹವ್ಯಾಸಿ ರಂಗಭೂಮಿಯೂ ದುರ್ಬಲವಾದ ಹಾಗಿದೆ. ಆದರೆ ನೈಜವಾಗಿಯೂ ರಂಗಭೂಮಿಯು ಒಳ್ಳೆಯ ಕಲಾವಿದನನ್ನು ರೂಪಿಸುತ್ತದೆ. ಆಪ್ತ ರಂಗಮಂದಿರಗಳು ಪ್ರೇಕ್ಷಕರನ್ನೂ ಕಲಾವಿದನನ್ನೂ ಒಟ್ಟಿಗೇ ವಿಕಾಸವಾಗುವಂತೆ ಮಾಡುತ್ತವೆ. ರಂಗದ ಮೇಲೆ ಬದ್ಧತೆ ಇರುವವರುರಂಗಭೂಮಿಯನ್ನೇ ನೆಚ್ಚಿಕೊಳ್ಳುತ್ತಾರೆ.

ಮುಂಬೈಯಲ್ಲಿ ಪೃಥ್ವಿ ರಾಜ್ ಕಪೂರ್ ನೇತೃತ್ವದ ಪೃಥ್ವಿ ಥಿಯೇಟರ್ ಇಂತಹ ಕೆಲಸವನ್ನು ಮಾಡಿದರೆ, ಬೆಂಗಳೂರಿನಲ್ಲಿ ರಂಗಶಂಕರ ಒಳ್ಳೆಯ ವೇದಿಕೆಯನ್ನು ಕಲ್ಪಿಸುತ್ತದೆ. ಪೃಥ್ವಿ ಥಿಯೇಟರ್ ಬಾಲಿವುಡ್‌ಗೆ ಅಡಿಪಾಯ ಹಾಕಿದೆ. ಹಲವಾರು ಪ್ರಯೋಗಗಳನ್ನು ಮಾಡುವಲ್ಲಿ ಉತ್ಸಾಹ ತೋರಿಸಿದೆ.

ಮರಾಠಿ ರಂಗಭೂಮಿ ಕ್ಷೇತ್ರವನ್ನು ನೋಡಿದರೆ ಅಸೂಯೆ ಆಗುತ್ತದೆ. ಅಲ್ಲಿ ವೈದ್ಯರು ತಮ್ಮ ಕ್ಲಿನಿಕ್ ಬಿಟ್ಟು ಬಂದು ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಜನರು ತಂಡೋಪತಂಡವಾಗಿ ಬಂದು ನಾಟಕ ನೋಡುವುದನ್ನು ರೂಢಿಸಿಕೊಂಡಿದ್ದಾರೆ. ಅದಕ್ಕೆ ತಕ್ಕಂತೆ ಅಲ್ಲಿ ನಿರಂತರವಾಗಿ ಪ್ರಯೋಗಗಳು ನಡೆಯುತ್ತಲೇ ಇವೆ. ನಾಟಕವನ್ನು ಬರೆದವರಿಗೂ ಪ್ರತೀ ಪ್ರದರ್ಶನಕ್ಕೆ ಇಷ್ಟು ಎಂಬಂತೆ ರಾಯಧನವನ್ನು ನೀಡಲಾಗುತ್ತಿದೆ. ಮಧ್ಯಾಹ್ನದ ವೇಳೆಯಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕ ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗುತ್ತದೆ. ಕೌಟುಂಬಿಕ ನಾಟಕಗಳಿಗೆ ಜನರು ಹೆಚ್ಚು ಒಲವು ತೋರಿಸುತ್ತಾರೆ.

*ಸ್ವರ್ಣಕಮಲ ಪ್ರಶಸ್ತಿ ಪಡೆದ ಚಿತ್ರದ (ಘಟಶ್ರಾದ್ಧ) ನಿರ್ಮಾಪಕರು ನೀವು. ಸಿನಿಮಾ ಮಾಧ್ಯಮದ ಬಗ್ಗೆ ಏನಂತೀರಿ?*

ಸಿನಿಮಾ ಕ್ಷೇತ್ರದಲ್ಲಿ ಈಗೀಗ ಹೊಸತನದ ಹುಡುಕಾಟ ಕಾಣುತ್ತಿದೆ. ಯುವಕರು, ಹೊಸಬರು ಒಳ್ಳೆಯ ತಂತ್ರಜ್ಞಾನ, ಪರಿಕಲ್ಪನೆಗಳತ್ತ ಮುಖ ಮಾಡುತ್ತಿದ್ದಾರೆ ಎನ್ನುವುದು ಸಂತೋಷದ ವಿಷಯ. ಸಿದ್ಧಸೂತ್ರದ ಸಿನಿಮಾಗಳು ಕಡಿಮೆಯಾಗಿವೆ. ತಂತ್ರಜ್ಞಾನದ ಲಭ್ಯತೆಯನ್ನು ಗಮನಿಸಿದರೆ ಈಗ ಸಿನಿಮಾ ಮಾಡುವುದು ಸುಲಭ. ಆದರೆ ಅವೆಲ್ಲವೂ ದುಬಾರಿ ಕೂಡ. ಘಟಶ್ರಾದ್ಧ ಸಿನಿಮಾವನ್ನು ಸುಮಾರು ಎರಡೂವರೆ ಲಕ್ಷ ರೂಪಾಯಿಯಲ್ಲಿ ಮಾಡುವುದು ಸಾಧ್ಯವಾಗಿತ್ತು. ಆದರೆ ಈಗ ಕನ್ನಡ ಸಿನಿಮಾಗಳೂ ಎರಡು– ಮೂರು ಕೋಟಿಯನ್ನು ದಾಟಿ ಹೋಗುತ್ತಿವೆ.

*ಕೆಲ ಸಿನಿಮಾಗಳಿಗೆ ಥಿಯೇಟರ್ ಸಿಗುತ್ತಿಲ್ಲ?*

ಸಿನಿಮಾ ಮಾಡುವುದಕ್ಕೆ ನ್ಯಾಷನಲ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ನೆರವು ನೀಡುತ್ತದೆ. ಆದರೆ ಮಾಡಿದ ಸಿನಿಮಾವನ್ನು ಜನರಿಗೆ ತಲುಪಿಸುವುದಕ್ಕೆ ಸರ್ಕಾರ ಯಾವುದೇ ವ್ಯವಸ್ಥೆಯನ್ನು ಕಲ್ಪಿಸಿಲ್ಲ. ವಿತರಣೆಗೆ ಸೂಕ್ತವಾದ ವ್ಯವಸ್ಥೆಯೊಂದನ್ನು ರೂಪಿಸುವುದು ಅಗತ್ಯ. ಇದು ರಂಗಭೂಮಿಗೂ ಅನ್ವಯಿಸುತ್ತದೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಪ್ರೇಕ್ಷಕರನ್ನು ಬೆಳೆಸುವುದಕ್ಕೆ ಬೇಕಾದ ವ್ಯವಸ್ಥೆ ಇಲ್ಲ. ಅದು ರಂಗಮಂದಿರಗಳಾಗಬಹುದು, ಅಥವಾ ಸಿನಿಮಾ ಮಂದಿರಗಳೂ ಆಗಿರಬಹುದು. ಇಂದು ಎಲ್ಲರೂ ಹಣದ ಹಿಂದೆ ಓಡುತ್ತಿದ್ದಾರೆ. ಅದು ತಪ್ಪೋ ಸರಿಯೋ ಬೇರೆ ಮಾತು. ಆದರೆ ಸಾಮಾಜಿಕ ಜವಾಬ್ದಾರಿ ಪ್ರತಿಯೊಬ್ಬರಿಗೂ ಇರಬೇಕು. ಅದು ರಂಗಭೂಮಿ ಮತ್ತ ಸಿನಿಮಾ ಕ್ಷೇತ್ರಕ್ಕೂ ಅನ್ವಯಿಸುತ್ತದೆ.

*ಸರ್ಕಾರ ಏನು ಮಾಡಬಹುದು?*

ಸಿನಿಮಾ ಉತ್ಸವಗಳೂ ಅಷ್ಟೆ. ಅನಗತ್ಯ ಖರ್ಚಿನಲ್ಲಿಯೇ ಎಲ್ಲವೂ ಮುಗಿದು ಹೋಗುತ್ತದೆ. ಆದರೆ ಜನರನ್ನು ನೈಜವಾಗಿ ತಲುಪಬೇಕು ಮತ್ತು ನಾಟಕ ಅಥವಾ ಸಿನಿಮಾ ಪ್ರದರ್ಶನದಿಂದ ಅವರ ಮನೋವಿಕಾಸ ಆಗಬೇಕು ಎಂಬ ಆಶಯ ಈಗಿನ ವ್ಯವಸ್ಥೆಯಲ್ಲಿ ಕಾಣುವುದಿಲ್ಲ. ಸರ್ಕಾರಿ ವ್ಯವಸ್ಥೆಯಲ್ಲಿ ಉತ್ತಮ ಐಡಿಯಾಗಳು ಇದ್ದೇ ಇರುತ್ತವೆ. ಆದರೆ ಅದನ್ನು ಜಾರಿಗೊಳಿಸುವ ಸ್ಥಾನದಲ್ಲಿ ಸಾಮಾಜಿಕ ಬದ್ಧತೆ ಇರುವವರು ಬಂದಾಗ ಆ ಐಡಿಯಾಗಳು ಜಾರಿಯಾಗುತ್ತವೆ ಅಷ್ಟೆ.

70ರ ದಶಕದಲ್ಲಿ ಹೊಸ ಅಲೆಯ ಚಿತ್ರಗಳು ಬಂದಾಗ ನವ್ಯ ಎಂಬ ವಿತರಣಾ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಬೆಂಗಳೂರು, ಮೈಸೂರು, ಧಾರವಾಡದಲ್ಲಿ ಚಿಕ್ಕಚಿಕ್ಕ ಸಿನಿಮಾ ಮಂದಿರಗಳನ್ನು ಹೊಸ ಅಲೆಯ ಚಿತ್ರಗಳಿಗೆ ಮೀಸಲಿಡಬೇಕು ಎಂಬ ಆಶಯದಿಂದ ಈ ವ್ಯವಸ್ಥೆ ರೂಪಿಸಲು ನಿರ್ಧರಿಸಲಾಯಿತು. ಆದರೆ ಈ ವ್ಯವಸ್ಥೆಯನ್ನು ಬಲಪಡಿಸಲು ಬೇಕಾದ ಕೆಲಸಗಳನ್ನು ನಿರ್ವಹಿಸಲು, ಸಮಯ ಕೊಡಲು ಯಾರಿಗೂ ಆಗದೇ ಇದ್ದುದರಿಂದ ಅದು ಬಿದ್ದು ಹೋಯಿತು. ಅಂತಹ ವ್ಯವಸ್ಥೆಯ ಅಗತ್ಯ ಇಂದಿಗೂ ಇದೆ. ಸಿನಿಮಾ ಕ್ಷೇತ್ರದಲ್ಲಾಗಲೀ, ರಂಗಭೂಮಿಯಲ್ಲಾಗಲೀ ಒಳ್ಳೆಯ ಸಂಘಟಕರು ಅಗತ್ಯ. ಇಂದಿಗೂ ಶೇಷಾದ್ರಿ, ಕಾಸರವಳ್ಳಿ, ಬಿ. ಸುರೇಶ್ ಅಂತಹವರು ಸಾಮಾಜಿಕ ಬದ್ಧತೆಯಿಂದ ಮಾಡುವ ಚಿತ್ರಗಳಿಗೆ ಸಿನಿಮಾ ಮಂದಿರಗಳು ಸಿಗುತ್ತಿಲ್ಲ ಅಂತಾರೆ. ಅಂತಹ ಚಿತ್ರಗಳ ಪ್ರಚಾರ ಮತ್ತು ವಿತರಣೆ ಸಮರ್ಪಕವಾಗಿ ಆದಾಗ ಹೊಸಬರೂ ಇವುಗಳತ್ತ ಗಮನ ಹರಿಸುತ್ತಾರೆ.

*ಪ್ರಸ್ತುತ ಹೊಸ ನಾಟಕ ಅಥವಾ ಸಿನಿಮಾ ಮಾಡುತ್ತಿದ್ದೀರಾ..?*

ಪ್ರಸ್ತುತ ನಾನು ಮತ್ತೊಂದು ನಾಟಕವನ್ನು ನಿರ್ದೇಶಿಸಬೇಕು ಎಂಬ ಉದ್ದೇಶದಿಂದ ತಂಡವೊಂದನ್ನು ಕಟ್ಟುತ್ತಿದ್ದೇನೆ. ಗಿರೀಶ್ ಕಾಸರವಳ್ಳಿ ಅವರೊಂದಿಗೆ ಕೈ ಜೋಡಿಸುವ ಉದ್ದೇಶವಿದೆ. ಹಿಂದೆ 'ಘಟಶ್ರಾದ್ಧ' ಮಾಡಿದಂತೆ ಇಬ್ಬರೂ ಸೇರಿ ಇನ್ನೊಂದು ಸಿನಿಮಾ ಮಾಡುವ ಆಲೋಚನೆ ಇದೆ. ಏನಾಗುತ್ತೋ ನೋಡಬೇಕು.